C.C– 1672/2025

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 04.05.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಐ.ಎನ್.ಎಸ್ ರವರಿಂದಃ**

**1.** ನಾನು ಬಿ ಎ ಜರ್ನಲಿಸಮ್ ಅನ್ನು 2007 ರಲ್ಲಿ ಮುಗಿಸಿದ್ದೇನೆ. ಆರೋಪಿತನು ಅವರ ಮಗ ಸಚಿನ್ ಜೈನ್ ರವರ ಮೂಲಕ 2015 ರಲ್ಲಿ ಪರಿಚಯವಾಗಿದ್ದಾನೆ. ಹೆಚ್ಚಿನ ವಿದ್ಯಾಭ್ಯಾಸವನ್ನು ನಾನು ಮಾಡಲು ಹೋಗಿಲ್ಲ, ಕಾರಣ ನಾನು 2009 ರಿಂದ ವ್ಯವಹಾರವನ್ನು ಮಾಡಲು ಪ್ರಾರಂಭಿಸಿದೆನು. 2009 ರಲ್ಲಿ ಶಿವಮೊಗ್ಗ ಟೌನ್ ನಲ್ಲಿ ಒರಿಜಿನ್ ಮೊಬೈಲ್ ನ ಡಿಲರ್ ಶಿಪ್ ಅನ್ನು ತೆಗೆದುಕೊಂಡಿದ್ದೆ. 2011 ರಲ್ಲಿ ಸದರಿ ವ್ಯವಹಾರವನ್ನು ಮುಕ್ತಾಯಗೊಳಿಸಿ 2011 ನೇ ಸಾಲಿನಿಂದ ಕಟ್ಟಡ ನಿರ್ಮಾಣ ಕೆಲಸವನ್ನು ಮಾಡಿಸುವ ಗುತ್ತಿಗೆದಾರನಾಗಿ ನಾನು ಕೆಲಸ ಮಾಡಲು ಪ್ರಾರಂಭ ಮಾಡಿದ್ದೆ. ಒರಿಜಿನ್ ಮೊಬೈಲ್

ವ್ಯವಹಾರದಲ್ಲಿ ನನಗೆ ಲಾಭವು ಆಗಿಲ್ಲ, ನಷ್ಟವು ಆಗಿಲ್ಲ. ಆದರೆ ಕಂಪನಿಯವರು ಸರಿಯಾಗಿ ಸಹಕಾರ ನೀಡದ ಕಾರಣ ಆ ವ್ಯವಹಾರವನ್ನು ನಾನು ಮುಕ್ತಾಯ ಮಾಡಿರುತ್ತೇನೆ.

**2.** ನಾನು ಗುತ್ತಿಗೆದಾರ ಎನ್ನುವ ಬಗ್ಗೆ ಅಧಿಕೃತವಾಗಿ ಪರವಾನಗಿಯನ್ನು ಪಡೆದುಕೊಂಡಿಲ್ಲ. ಆನಂತರ ನಾನು ಪರವಾನಗಿಯನ್ನು ಪಡೆಯಲು ಪ್ರಯತ್ನ ಮಾಡಿದ್ದು, ಈವರೆಗೆ ನಾನು ಗುತ್ತಿಗೆದಾರನೆಂದು ಪರವಾನಗಿಯನ್ನು ಪಡೆದುಕೊಂಡಿಲ್ಲ. ಪರವಾನಗಿಯನ್ನು ಪಡೆಯದೆ ಕಟ್ಟಡ ನಿರ್ಮಾಣವನ್ನು ಮಾಡುವುದು ಅಪರಾಧ ಎಂದರೆ, ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 2012 ರಲ್ಲಿ ಒಂದು ಕಟ್ಟಡವನ್ನು ಗುತ್ತಿಗೆಗೆ ಪಡೆದು ನಂತರ ಗುತ್ತಿಗೆದಾರನ ಕೆಲಸವನ್ನು ನಾನು ನಿಲ್ಲಿಸಿದ್ದೇನೆ. 2012 ರ ನಂತರ ನಾನು ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದೇನೆ. 2012 ರಿಂದ ನಾನು ಈವರೆಗೆ ಒಟ್ಟು 2 ನಿವೇಶನಗಳನ್ನು ಖರೀದಿ ಮಾಡಿ ಮಾರಾಟ ಮಾಡಿದ್ದೇನೆ ಹಾಗೂ 5 ನಿವೇಶನಗಳ ಕುರಿತು ಕರಾರನ್ನು ಮಾಡಿಕೊಂಡಿದ್ದೇನೆ. ಸದರಿ ಕರಾರಿನ ದಾಖಲೆಗಳು ಇಲ್ಲ, ಆದರೆ ನಿವೇಶನಗಳನ್ನು ಖರೀದಿ ಮಾಡಿದ್ದಕ್ಕೆ ನನ್ನ ಬಳಿ ದಾಖಲೆಗಳು ಇವೆ. ಸದರಿ ನಿವೇಶನಗಳನ್ನು ಯಾವ ವರ್ಷ ಖರೀದಿ ಮಾಡಿದ್ದೇನೆ ಎಂದು ಈಗ ನನಗೆ ನಿಖರವಾದ ದಿನಾಂಕ ನೆನಪಿಲ್ಲ. ಸದರಿ ನಿವೇಶನಗಳನ್ನು ಖರೀದಿ ಮಾಡಲು ಹಣವನ್ನು ನನ್ನ ಸಹೋದರ ನೀಡಿದ್ದನು.

**3.** ನನ್ನ ಅಣ್ಣ ಹಾಂಗ್ ಕಾಂಗ್ ನಲ್ಲಿ ಸಾಫ್ಟ್ ವೇರ್ ಇಂಜೇನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ನಿವೇಶನಗಳ ಖರೀದಿಗೆ ಹಣವನ್ನು ನನ್ನ ಅಣ್ಣ ನಗದಾಗಿ ಮತ್ತು ನನ್ನ ಖಾತೆಗೆ ಹಣವನ್ನು ವರ್ಗಾವಣೆ ಮಾಡುವ ಮೂಲಕ ನೀಡಿದ್ದಾನೆ. ಮೊದಲನೇ ನಿವೇಶನವನ್ನು ಖರೀದಿಸಲು 6.5–8.5 ಲಕ್ಷ ಆಗಿರಬಹುದು. ಸದರಿ ನಿವೇಶನಕ್ಕೆ ನೀಡಿದ ಒಟ್ಟು ಹಣವನ್ನು ನನ್ನ ಅಣ್ಣನೇ ನೀಡಿದ್ದಾನೆ. ಆ ನಿವೇಶನವನ್ನು ಖರೀದಿಸಿದ ನಂತರ ಅಲ್ಲಿ ಮನೆಯನ್ನು ಕಟ್ಟಿ ಆನಂತರ ಮಾರಾಟ ಮಾಡಿದ್ದೇನೆ. 17 ಲಕ್ಷ ರೂ.ಗಳನ್ನು ವಿನಿಯೋಗಿಸಿ ಆ ನಿವೇಶನದಲ್ಲಿ ಮನೆಯನ್ನು ಕಟ್ಟಿದ್ದೇವೆ. ಆ ಹಣವನ್ನು ನನ್ನ ಅಣ್ಣನೇ ಕೊಟ್ಟಿದ್ದಾನೆ. ಸದರಿ 17 ಲಕ್ಷ ರೂ.ಗಳ ಪೈಕಿ ಭಾಗಶಃ ನಗದು ಹಾಗೂ ಭಾಗಶಃ ಖಾತೆ ಮೂಲಕ ವರ್ಗಾವಣೆ ಮಾಡಿದ್ದಾನೆ. ಎಷ್ಟು ಹಣವನ್ನು ನಗದು ಮತ್ತು ಖಾತೆ ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದು ನನಗೆ ನಿಖರವಾಗಿ ನೆನಪಿಲ್ಲ.

**4.** 2 ನೇ ನಿವೇಶನವನ್ನು 1 ನೇ ನಿವೇಶನದ ಕಟ್ಟಡ ನಿರ್ಮಾಣ ಕಾರ್ಯ ಮುಗಿದ ನಂತರ 5.5–6 ಲಕ್ಷ ರೂ.ಗಳಿಗೆ 1 ನೇ ನಿವೇಶನವನ್ನು ಮಾರಾಟ ಮಾಡಿದ ಹಣದಿಂದ ಖರೀದಿ ಮಾಡಿದ್ದೆ. 1 ನೇ ನಿವೇಶನವನ್ನು ಆ ಹೊತ್ತಿಗೆ 22–22 ಲಕ್ಷ ರೂ.ಗಳಿಗೆ ಮಾರಾಟ ಮಾಡಿದ್ದೆ. 2 ನೇ ನಿವೇಶನವನ್ನು ಸಹ ಮನೆ ಕಟ್ಟಿದ ನಂತರ ಮಾರಾಟ ಮಾಡಿದ್ದೇನೆ. 2 ನೇ ನಿವೇಶನದಲ್ಲಿ ಸುಮಾರು 15–17 ಲಕ್ಷ

ರೂ.ಗಳಲ್ಲಿ ಕಟ್ಟಡವನ್ನು ನಿರ್ಮಿಸಿ ನಂತರ ಮಾರಾಟ ಮಾಡಿದ್ದೇನೆ. 1 ಮತ್ತು 2 ನೇ ನಿವೇಶನಗಳಲ್ಲಿ ಕಟ್ಟಿದ ಕಟ್ಟಡ ನಿರ್ಮಾಣ ಕಾರ್ಯವನ್ನು ನನ್ನ ಮುಂದಾಳತ್ವದಲ್ಲಿಯೇ ಮಾಡಲಾಗಿದೆ. 2 ನೇ ನಿವೇಶನವನ್ನು ಅದರಲ್ಲಿನ ಮನೆಯೊಂದಿಗೆ ಸುಮಾರು 20 ಲಕ್ಷಕ್ಕೂ ಮೇಲ್ಪಟ್ಟು ಮಾರಾಟ ಮಾಡಿದ್ದು, ನಿಖರವಾದ ಮೊತ್ತ ನನಗೆ ನೆನಪಿಲ್ಲ.

**5.** 2011-12 ನೇ ಸಾಲಿನಲ್ಲಿ ನಾನು ಒಂದೇ ಕಟ್ಟಡದ ಗುತ್ತಿಗೆ ಕೆಲಸವನ್ನು ಮಾಡಿದ್ದೆ ಎಂದರೆ ಸರಿ. ಆದ್ದರಿಂದ ನನಗೆ ಹೆಚ್ಚಿನ ಅನುಭವ ಇರಲಿಲ್ಲ ಎಂದರೆ ಸರಿ. ಮೇಲ್ಕಂಡ 1 ಮತ್ತು 2 ನಿವೇಶನಗಳಲ್ಲಿ ನಿರ್ಮಿಸಿದ ಕಟ್ಟಡಗಳಿಗೆ ಆದ ಖರ್ಚು ವೆಚ್ಚಗಳನ್ನು ನಾನು ಪುಸ್ತಕದಲ್ಲಿ ಬರೆದಿಟ್ಟುಕೊಂಡಿದ್ದೆ ಎಂದರೆ ಸರಿಯಿಲ್ಲ. ಸದರಿ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ನಾನು ಬ್ಯಾಂಕಿನಿಂದ ಅರ್ಥಿಕ ನೆರವನ್ನು ಪಡೆದಿಲ್ಲ. ಆ ಕಟ್ಟಡಗಳನ್ನು ನಿರ್ಮಿಸಲು ಅರ್ಧ ಹಣವನ್ನು ಬ್ಯಾಂಕಿನಿಂದ ಪಡೆದು, ಉಳಿದ ಹಣ ಮನೆಯಲ್ಲಿಯೇ ಇತ್ತು. ಕಟ್ಟಡ ನಿರ್ಮಾಣ ಮಾಡುವಾಗ ಎಷ್ಟು ಬಾರಿ ನಾನು ಬ್ಯಾಂಕಿನಲ್ಲಿ ಹಣದ ವ್ಯವಹಾರ ಮಾಡಿದ್ದೇನೆ ಎಂದು ಈಗ ನನಗೆ ನೆನಪಿಲ್ಲ.

**6.** 5 ನಿವೇಶನಗಳ ಕುರಿತು ನಾನು ಮೌಖಿಕ ಕರಾರನ್ನು ಮಾಡಿಕೊಂಡಿದ್ದೇನೆ. ಸದರಿ ಕರಾರುಗಳನ್ನು ಮಾಡಿಕೊಂಡಿರುವ ವ್ಯಕ್ತಿಗಳೆಂದರೆ ನಮ್ಮ ಮನೆ ಹಿಂದೆ ಇರುವ ನಿವೇಶನದ ಮಾಲೀಕನ ಹೆಸರು ಮೊಹಮ್ಮದ್ ತಾರೀಖ್. ರಾಘವೇಂದ್ರ ಎಸ್ ಎಂ ಎನ್ನುವವರಿಂದ 2 ನಿವೇಶನಗಳ ಕುರಿತು ಕರಾರನ್ನು ಮಾಡಿಕೊಂಡಿದ್ದು, ಉಳಿದ 2 ಮಾಲೀಕರ ಹೆಸರು ನನಗೆ ಈಗ ನೆನಪಿಲ್ಲ. ಸದರಿ ನಿವೇಶಗಳನ್ನು ಖರೀದಿ ಮಾಡಿದ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ. ಸದರಿ ನಾನು 5 ಮೌಖಿಕ ಕರಾರುಗಳನ್ನು ಮಾಡಿಸಿದ್ದ ಮಾಲೀಕ ಮತ್ತು ಖರೀದಿದಾರರ ನಡುವೆ ನೊಂದಾಯಿತ ಕ್ರಯ ಪತ್ರಗಳು ಆಗಿವೆ. ಅವರುಗಳಿಗೆ ಯಾವ ವರ್ಷದಲ್ಲಿ ಕ್ರಯ ಪತ್ರಗಳು ನೊಂದಣಿಯಾಗಿವೆ ಎಂದು ಈಗ ನನಗೆ ನೆನಪಿಲ್ಲ ಹಾಗೂ ಸದರಿ ಖರೀದಿದಾರರ ಹೆಸರು ಸಹ ನನಗೆ ನೆನಪಿಲ್ಲ.

**7.** ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಮಾಲೀಕ ಮತ್ತು ಖರೀದಿದಾರರ ವಿವರಗಳನ್ನು ಹಾಗೂ ನಿವೇಶನದ ವಿವರಗಳನ್ನು ಸಹ ಏಜೆಂಟ್ ಆದ ನಾವು ಪಡೆದುಕೊಂಡು, ಆನಂತರ ಕ್ರಯದ ವ್ಯವಹಾರವನ್ನು ಮಾಡುತ್ತೇವೆ ಎಂದರೆ, ಸಾಕ್ಷಿಯು ನಾನು ವಿವರಗಳನ್ನು ಪಡೆದುಕೊಳ್ಳುವುದು ಎಂದು ನುಡಿಯುತ್ತಾರೆ. 2021 ರಲ್ಲಿ ನಾನು ಕೊನೆಯದಾಗಿ ನಿವೇಶನದ ಕ್ರಯದ ವ್ಯವಹಾರವನ್ನು ಮಾಡಿದ್ದೇನೆ. ಹೊಸನಗರ ತಾಲ್ಲೂಕು, ರಿಪ್ಪನಪೇಟೆಯ ಗವಟೂರಿನಲ್ಲಿನ 3 ಎಕರೆ ಜಾಗವನ್ನು ನಟರಾಜ ರವರಿಂದ ರಮೇಶ ಹೆಬ್ಬಾರ್ ಎನ್ನುವವರಿಗೆ ಕೊನೆಯದಾಗಿ ನಾನು 2021 ರಲ್ಲಿ ಜಾಗವನ್ನು ಕೊಡಿಸಿದ್ದೇನೆ. ಸದರಿ 3 ಎಕರೆ ಜಾಗಕ್ಕೆ ಸುಮಾರು 25-30 ಲಕ್ಷ ಬೆಲೆಯನ್ನು ನಿಗಧಿ ಮಾಡಲಾಗಿತ್ತು.

ಆ ಸಂದರ್ಭದಲ್ಲಿ ಸರ್ಕಾರದಂತೆ ಸ್ವತ್ತಿನ ಮೌಲ್ಯ ಎಷ್ಟು ಇತ್ತು ಎಂದು ನನಗೆ ಈಗ ನೆನಪಿಲ್ಲ. ಆ ವ್ಯವಹಾರದಿಂದ ನನಗೆ 5 ಲಕ್ಷ ಕಮಿಷನ್ ಬಂತು.

**8.** ಸಾಗರದ ವಿವಿಧ ನ್ಯಾಯಾಲಯಗಳಲ್ಲಿ ವಿವಿಧ ವ್ಯಕ್ತಿಗಳ ವಿರುದ್ಧ ನಾನು 2 ಚೆಕ್ ಬೌನ್ಸ್ ಕೇಸುಗಳನ್ನು ಹಾಕಿದ್ದೇನೆ. ಬೇರೆ ಯಾವುದೇ ಚೆಕ್ ಬೌನ್ಸ್ ಕೇಸುಗಳನ್ನು ನಾನು ಹಾಕಿಲ್ಲ. ನನ್ನ ವಾಸದ ಮನೆ ಸಾಗರ ಟೌನ್ ನ ನಿರ್ಕೋಡು ಬಡಾವಣೆಯಲ್ಲಿ ಇದೆ. ಸುಮಾರು 6 ½ ವರ್ಷಗಳಿಂದ ನಾನು ಸದರಿ ನಿರ್ಕೋಡು ಬಡಾವಣೆಯಲ್ಲಿ ವಾಸವಾಗಿದ್ದೇನೆ. ಅದು ನನ್ನ ಅಣ್ಣನ ಸ್ವಂತ ಮನೆ.2020 ನೇ ಸಾಲಿಗಿಂತ ಪೂರ್ವದಿಂದಲೂ ನಾನು ಆ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ದೂರಿನಲ್ಲಿ ವಿಳಾಸವನ್ನು ಬೇರೆ ಬರೆಸಿದ್ದೇನೆ ಎಂದರೆ, ಸಾಕ್ಷಿಯು ಆಧಾರ್ ಕಾರ್ಡಿನಲ್ಲಿ ಇರುವ ವಿಳಾಸವನ್ನು ದೂರಿನಲ್ಲಿ ಬರೆಸಿದ್ದೇನೆ ಎನ್ನುತ್ತಾರೆ. ನಿರ್ಕೋಡು ಬಡಾವಣೆಯ ವಿಳಾಸವನ್ನು ದೂರಿನಲ್ಲಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

**9.** ನಿರ್ಕೋಡು ಬಡಾವಣೆಯಲ್ಲಿ ನಾನು ಈಗ ವಾಸವಾಗಿರುವ ಮನೆಯ ಪಕ್ಕದಲ್ಲಿ ಆರೋಪಿತನ ವಾಸದ ಮನೆ ಇದೆ ಎಂದರೆ ಸರಿ. ಆರೋಪಿತನ ಮಗ ಸಚಿನ್ ಜೈನ್ ಎನ್ನುವವರು ನನ್ನ ಸ್ನೇಹಿತರ ಬಳಗದಲ್ಲಿ ನಾನು ಇರುವಾಗ ಅಲ್ಲಿಗೆ ಅವನು ಬಂದು ಹೋಗುತ್ತಿದ್ದರಿಂದ ನನಗೆ ಅವನು ಪರಿಚಯವಾಗಿದ್ದಾನೆ. ಸಚಿನ್ ಜೈನ್ ನೊಂದಿಗೆ ಸಹ ನಾನು ಹಣಕಾಸಿನ ವ್ಯವಹಾರ ಮಾಡಿದ್ದೇನೆ. ಅದು ಏನು ವ್ಯವಹಾರವೆಂದರೆ, ಅವನು ಅಲ್ಲಿ ಇಲ್ಲಿ ಕೈ ಸಾಲ ಮಾಡಿಕೊಂಡಿದ್ದಾಗ ನನ್ನಿಂದ 5-6 ಸಾವಿರ ರೂ.ಗಳಂತೆ ಹಣವನ್ನು 2016 ರಿಂದ 2021 ಫೆಬ್ರವರಿವರೆಗೆ ಸಾಲವಾಗಿ ಪಡೆದುಕೊಂಡು ಹಣವನ್ನು ವಾಪಸ್ಸು ನೀಡಿದನು. ಕೊನೆಯದಾಗಿ ನನ್ನಿಂದ ಪಡೆದುಕೊಂಡಿದ್ದ 70 ಸಾವಿರ ರೂ.ಗಳನ್ನು ಆರೋಪಿತನ ಮಗ ನನಗೆ ವಾಪಾಸ್ಸು ನೀಡಿಲ್ಲ. ಸದರಿ 70 ಸಾವಿರ ರೂ.ಗಳಿಗೆ ಸಂಬಂಧಪಟ್ಟಂತೆ ನಾನು ಯಾವುದೇ ದೂರನ್ನು ಸಚಿನ್ ಜೈನ್ ರವರ ವಿರುದ್ಧ ನೀಡಿಲ್ಲ.

**10.** ಆರೋಪಿತನು ಅವನು ನಿವೇಶನವನ್ನು ಖರೀದಿ ಮಾಡಿದಾಗ ಅಂದರೆ ಸುಮಾರು 2016-17 ನೇ ಸಾಲಿನಲ್ಲಿ ನನಗೆ ಪರಿಚಯವಾಗಿರಬಹುದು. ಈ ಕೇಸಿನ ವ್ಯವಹಾರವನ್ನು ಹೊರತು ಪಡಿಸಿ ಆರೋಪಿತನೊಂದಿಗೆ ಬೇರೆ ಯಾವುದಾದರೂ ವ್ಯವಹಾರವನ್ನು ಮಾಡಿದ್ದೀರಾ ಎಂದರೆ, ಸಾಕ್ಷಿಯು ನಿವೇಶನ ಖರೀದಿ ಮಾಡಲು 2017-18 ನೇ ಸಾಲಿನಲ್ಲಿ 2 ಲಕ್ಷ ರೂ.ಗಳನ್ನು ಆರೋಪಿತನು ನನ್ನಿಂದ ನಗದು ರೂಪದಲ್ಲಿ ಸಾಲವಾಗಿ ಪಡೆದಿದ್ದನು. ಸದರಿ ಹಣಕ್ಕೆ ಯಾವುದೇ ಕರಾರನ್ನು ಮಾಡಿಕೊಂಡಿರಲಿಲ್ಲ. ಆರೋಪಿತನು ನನಗೆ ಸುಮಾರು 3-4 ವರ್ಷಗಳಿಂದ ಪರಿಚಯವಿದ್ದ ಕಾರಣ ನಾನು ಯಾವುದೇ ಕರಾರು ಇಲ್ಲದೆ ನಗದಾಗಿ ಸಾಲವನ್ನು ನೀಡಿದ್ದೆ. ಆರೋಪಿತನೊಂದಿಗೆ ಹಣದ

ವ್ಯವಹಾರವನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರವನ್ನು ನಾನು ಮಾಡಿಲ್ಲ. ನಾನು ಹೇಳಿದಂತೆ ಮೇಲೆ ಹೇಳಿದ 2 ಲಕ್ಷ ರೂ.ಗಳನ್ನು ಆರೋಪಿತನು ನನ್ನಿಂದ ಸಾಲವಾಗಿ ಪಡೆದಿಲ್ಲ ಎನ್ನುವುದು ಸರಿಯಲ್ಲ.

**11.** ನಾನು ನಿರ್ಕೋಡು ಬಡಾವಣೆಯ ನನ್ನ ಅಣ್ಣನ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದ 1 ವರ್ಷದ ನಂತರ ಆರೋಪಿತನು ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದಾನೆ. ಆರೋಪಿತನ ಮನೆಯನ್ನು ಕಟ್ಟಿದ ಗುತ್ತಿಗೆದಾರನು ಯಾರು ಎಂದು ನನಗೆ ಗೊತ್ತಿಲ್ಲ. ಆರೋಪಿತನು ತನ್ನ ಮನೆಯನ್ನು ಕಟ್ಟಲು ಸುಮಾರು 1 ½ –2 ವರ್ಷಗಳನ್ನು ತೆಗೆದುಕೊಂಡ ಎಂದರೆ ನನಗೆ ಗೊತ್ತಿಲ್ಲ.

**12.** ಆರೋಪಿತನೊಂದಿಗೆ ನಾನು ಗಲಾಟೆ ಮಾಡಿದ್ದೆ ಎಂದು ಆಪಾದಿಸಿ ನನ್ನ ವಿರುದ್ಧ ಆರೋಪಿತನು ದೂರನ್ನು ನೀಡಿದ್ದ ಎಂದರೆ ಸರಿ. ಆರೋಪಿತನ ಮನೆಯ ಕಟ್ಟಡ ನಿರ್ಮಾಣ ಕಾರ್ಯವನ್ನು ಮಾಡಲು ನಾನು ಗುತ್ತಿಗೆಗೆ ಪಡೆದಿದ್ದೆ ಎಂದರೆ ಸರಿಯಲ್ಲ. ಮುಂದುವರೆದು ನಾನು ಮನೆ ಕಟ್ಟಲು ಬೇಕಾದ ಸಾಮಾಗ್ರಿಗಳನ್ನು ಅವರಿಗೆ ಪ್ರಾರಂಭದಲ್ಲಿ ಕೊಡಿಸಿದ್ದೆ ಎನ್ನುತ್ತಾರೆ. ಆದ ಕಾರಣ ಸದರಿ ಮನೆಯ ನಿರ್ಮಾಣ ಕಾರ್ಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ ನನಗೆ ಗೊತ್ತು ಎನ್ನುವುದು ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ಆರೋಪಿತನ ಮನೆಯ ಕಟ್ಟಡ ನಿರ್ಮಾಣ ಕಾರ್ಯವನ್ನು ನಾನು ಮಾಡಿದ್ದಾಗಿ ನಾನು ಹೇಳಿಕೆ ನೀಡಿದ್ದೇನೆ ಎಂದರೆ, ಸಾಕ್ಷಿಯು ನಾನು ಸಾಮಾಗ್ರಿಗಳನ್ನು ಕೊಡಿಸಿರುವುದಾಗಿ ಹೇಳಿದ್ದು, ಆರೋಪಿತನು ಪೋಲಿಸರ ಮೇಲೆ ಪ್ರಭಾರ ಬೀರಿದ್ದರಿಂದ ಹಾಗೆ ಬರೆದಿರಬಹುದು ಎನ್ನುತ್ತಾರೆ. ನಾನು ವಿದ್ಯಾವಂತನಾಗಿದ್ದು, ಯಾವುದೇ ದಾಖಲೆಗಳಿಗೆ ಸಹಿ ಮಾಡುವ ಮೊದಲು ಅದನ್ನು ಓದುತ್ತೇನೆ ಎಂದರೆ ಸರಿ. ಪೋಲಿಸರ ಮುಂದೆ ನೀಡಿದ ಹೇಳಿಕೆಗೆ ನಾನು ಓದಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಚಿನ್ ಜೈನ್ ಇವನು ದೂರನ್ನು ನೀಡಿದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಿರುವುದಾಗಿ ನಾವು ವರದಿ ಬರೆದುಕೊಳ್ಳುತ್ತೇವೆ ಎಂದು ಹೇಳಿದ ಕಾರಣ ನಾನು ಅದನ್ನು ಓದದೇ ಸಹಿ ಮಾಡಿದ್ದೇನೆ. ಆರೋಪಿತನಿಂದ ನಾನು ಗಲಾಟೆ ಮಾಡಿ ಕಿತ್ತುಕೊಂಡು ಹೋಗಿದ್ದ ಮೊಬೈಲ್ ಅನ್ನು ಪೋಲಿಸ್ ಠಾಣೆಯಲ್ಲಿಯೇ ಬರವಣಿಗೆ ಮಾಡಿದ ನಂತರ ನಾನು ಅದನ್ನು ವಾಪಸ್ಸು ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ನ್ಯಾಯಾಲಯ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**13.** ನಾನು  ವಿದ್ಯಾವಂತನಾಗಿರುವುದರಿಂದ ನನಗೆ ಖಾತೆ ಮೂಲಕ ಎಷ್ಟು ಹಣ ಹಾಗೂ ನಗದಾಗಿ ಎಷ್ಟು ಹಣದ ವ್ಯವಹಾರವನ್ನು ಮಾಡಬೇಕು ಎಂದು ನನಗೆ ತಿಳಿದಿದೆ ಎಂದರೆ ಸರಿ. ಆರೋಪಿತನಿಗೆ ನಾವು ಮೋಸ ಮಾಡಿದ್ದೇವೆ ಎನ್ನುವ ಆಪಾಧನೆ ಮೇರೆಗೆ ನನ್ನ ಹಾಗೂ ಸುರೇಶ ಮತ್ತು ಜಾಫರ್ ಸಾದಿಕ್ ಎನ್ನುವವರ ವಿರುದ್ಧ ಸಿಸಿ 1670/2025 ರಂತೆ ಇದೇ ನ್ಯಾಯಾಲಯದಲ್ಲಿ ಆರೋಪಿತನು

ದಾಖಲಿಸಿದ ಪ್ರಕರಣವು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಸದರಿ ಕೇಸಿನ ವಿರುದ್ಧ ನಾನು ಮತ್ತು ಇತರೆ ಆರೋಪಿತರು ಮೇಲ್ಮನವಿಯನ್ನು ದಾಖಲು ಮಾಡಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.